**ಸಾಕ್ಷಿಯನ್ನು ದಿಃ *31/07/2023* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ಃ ವಾದಿಯ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

***ಪಾಟೀ ಸವಾಲು ಃ ಶ್ರೀ ಪಿಎಂಆರ್ ವಕೀಲರಿಂದ ಪ್ರತಿವಾದಿ ನಂ.9(ಎ) ಪರವಾಗಿ.***

ನನಗೆ ವಾದಿ ಮತ್ತು ಪ್ರತಿವಾದಿಯರ ಪರಿಚಯವಿದೆ ಎಂದು ನನ್ನ ಪ್ರಮಾಣಪತ್ರದಲ್ಲಿ ಹೇಳಿದ್ದು ನಿಜವಿರುತ್ತದೆ, ಅವರ ವಿವರಗಳು ಗೊತ್ತು, ಆದರೆ ಎಲ್ಲ ಪ್ರತಿವಾದಿಗಳ ಹೆಸರು ಹೇಳಲು ಬರುವುದಿಲ್ಲ. ನಾನು ಮೂರನೇ ತರಗತಿಯವರೆಗೆ ಓದಿದ್ದೇನೆ, ನನಗೆ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ದಾವಾದಾಸ್ತಿಗಳು ಯಾವವು ಮತ್ತು ಎಲ್ಲಿವೆ ಎಂದು ಗೊತ್ತಿದೆ, ಆದರೆ ಅವುಗಳ ದಾಖಲೆಗಳನ್ನು ನಾನು ನೋಡಿಲ್ಲ. ದೀಪಕ ರೇಗೆರವರು ಹೇಳಿದ ಮೇರೆಗೆ ನನ್ನ ಸಾಕ್ಷಿ ನುಡಿಯಲು ಬಂದಿದ್ದೇನೆ, ಇಬ್ಬರೂ ಕೂಡಿಯೇ ನ್ಯಾಯಾಲಯಕ್ಕೆ ಬಂದಿದ್ದೇವೆ ಎಂದರೆ ಸರಿಯಲ್ಲ.

ನನ್ನ ಪ್ರಮಾಣಪತ್ರದ 4 ನೇ ಖಂಡಿಕೆಯಲ್ಲಿ ಹೇಳಿರುವ ಬಾಡಿಗೆ ವಿಷಯ ಸಂಗತಿ ನಿಜವಿರುತ್ತದೆ, ಅದನ್ನು ದೀಪಕ ರೇಗೆರವರು ಹೇಳಿದಕ್ಕೆ ಹಾಗೇ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಂಗಡಿ ದೀಪಕ ರೇಗೆರವರ ಅಂಗಡಿಯ ಪಕ್ಕದಲ್ಲಿದೆ ಎಂದರೆ ನಿಜ. ಬಾಡಿಗೆಯನ್ನು ವಾಸುದೇವ ರೇಗೆರವರು ತೆಗೆದುಕೊಳ್ಳುವ ಕುರಿತು ನನಗೆ ಮಾಹಿತಿ ಇದೆ. ಜಗದೀಶ ರೇಗೆ ಅವರಾಗಲಿ ಅಥವಾ ಅವರ ಹಯಾತಿಯ ನಂತರ ಅವರ ಕುಟುಂಬದವರಾಗಲಿ ನ್ಯಾಯಾಲಯದ ಆದೇಶದಂತೆ ಬಾಡಿಗೆ ವಸೂಲಿ ಮಾಡುತ್ತಿದ್ದರು ಎಂದರೆ ನಿಜ.

ದಾವಾದಾಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ನಾನು ಯಾವ ದಾಖಲೆ ನೋಡಿ ಹೇಳಿಲ್ಲ, ಎಲ್ಲರೂ ಅಂದುಕೊಂಡಿರುವ ಮಾತನ್ನು ಹೇಳುತ್ತಿದ್ದೇನೆ. ಸದರಿಯವರು ಏಕತ್ರ

ಕುಟುಂಬವಿದೆ ಎಂದು ನನಗೆ ದಾಖಲೆ ನೋಡಿ ಗೊತ್ತಾಗಿಲ್ಲ ಎಂದರೆ ನಿಜ. ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದೇ ಇದ್ದರೂ ಸಹ ದೀಪಕ ರೇಗೆರವರ ಹೇಳಿಕೆ ಮೇರೆಗೆ ನಾನು ಈ ರೀತಿ ಸುಳ್ಳು ಪ್ರಮಾಣಪತ್ರದ ಮುಖಾಂತರ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.